ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

6. ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ. ಹೆಂಜಾರಪ್ಪ ಅವರು ದಿನಾಂಕ 9-7-1995ರಂದು ಬೆಂಗಳೂರಿನಲ್ಲಿ ನಿಧನರಾದರು. ನಿವೃತ್ತ ಐ.ಎ.ಎಸ್. ಅಧಿಕಾರಿಯಾಗಿದ್ದ ಶ್ರೀಯುತರು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

7. ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ಈರೇಗೌಡ ಅವರು ದಿನಾಂಕ 4-6-1995ರಂದು ಪಾಂಡವಪುರದಲ್ಲಿ ನಿಧನರಾದರು, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಶಿಕ್ಷಣ ಸಂಸ್ಥೆಗಳನ್ನು ಹಾಗೂ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸಿ ಜನಹಿತ ಕಾರ್ಯಗಳಲ್ಲಿ ಹೆಚ್ಚಿನ ಶ್ರಮವಹಿಸಿದ ವ್ಯಕ್ತಿಯಾಗಿದ್ದರು.

8. ಹಿರಿಯ ಕಾಂಗ್ರೆಸ್ ನಾಯಕರೂ ಮಾಜಿ ಸಂಸತ್ ಸದಸ್ಯರು ಆದ ಪ್ರೊ.ಎನ್.ಜಿ. ರಂಗಾ ಅವರು ದಿನಾಂಕ 8-6-1995 ರಂದು ಗುಂಟೂರು ಜಿಲ್ಲೆಯ ಪೊನ್ನೂರಿನಲ್ಲಿ ನಿಧನರಾದರು, ಅವರು ಹೆಚ್ಚು ಅವಧಿಯವರೆಗೆ ಸಂಸತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಅವರ ದೀರ್ಘಕಾಲದ ಸದಸ್ಯತ್ವವನ್ನು ಗುರುತಿಸಿ ಗಿನ್ನೀಸ್ ಪುಸ್ತಕದಲ್ಲಿ ಅವರ ಹೆಸರು ದಾಖಲಾತಿಯಾಗಿದೆ. ಶ್ರೀಯುತರು ಮಹಾತ್ಮಾ ಗಾಂಧಿಯವರ ನಿಕಟ ಅನುಯಾಯಿಯಾಗಿದ್ದು, ಸ್ವಾತಂತ್ರ್ಯ ಹೋರಾಟಗಾರರಾಗಿ, ರೈತರ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡಿದ್ದ ಶ್ರೀಯುತರು ಹಲವಾರು ಗ್ರಂಥಗಳನ್ನು ಬರೆದು ಸಮಾಜಕ್ಕೆ ಕೊಡುಗೆ ನೀಡಿರುವ ಅಗ್ರಗಣ್ಯರಾಗಿದ್ದಾರೆ.

9. ಹಲವಾರು ದಶಕಗಳ ಕಾಲ ಕನ್ನಡದ ಪ್ರೇಕ್ಷಕರನ್ನು ನಗಿಸಿ ರಂಜಿಸಿದ ಕನ್ನಡ ಚಲನಚಿತ್ರ ನಟ ಶ್ರೀ ಟಿ.ಎನ್. ಬಾಲಕೃಷ್ಣ ಅವರು ದಿನಾಂಕ 19-7-1995ರಂದು ಬೆಂಗಳೂರಿನಲ್ಲಿ ನಿಧನರಾದರು, ಶ್ರೀಯುತರು 512 ಚಲನಚಿತ್ರಗಳಲ್ಲಿ ನಟಿಸಿ ಕನ್ನಡ ಕಲಾರಂಗವನ್ನು ಶ್ರೀಮಂತಗೊಳಿಸಿ, ಕನ್ನಡಿಗರ "ಅಭಿಮಾನ" ಸ್ಟುಡಿಯೋದಲ್ಲಿ ತಮ್ಮ ಆದಾಯವನ್ನೆಲ್ಲಾ ವಿನಿಯೋಗಿಸಿದ್ದರು, ಬಾಲಣ್ಣನವರು ಚಿತ್ರಗಳಲ್ಲಿ ಮಾಡುತ್ತಿದ್ದ ಹಾಸ್ಯದ ಮೋಡಿ ಕನ್ನಡಿಗರ ಹೃನ್ಮನಗಳಲ್ಲಿ ಸದಾ ಹಸಿರಾಗಿದೆ.

ನಿಧನ ಹೊಂದಿದವರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳಿಹಿಸಿಕೊಡಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಸಭಾಧ್ಯಕ್ಷರೇ, ಮಹಾರಾಷ್ಟ್ರ ಸರ್ಕಾರದ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳಿ...

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರಕ್ಕೆ ಮುಂಚಿತವಾಗಿ ಅದನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಏಕೆಂದರೆ ಮಹಾರಾಷ್ಟ್ರದಲ್ಲಿ ಒಂದು ನಿರ್ಣಯವಾಗಿದೆ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುತ್ತೇವೆಂದು. ಅದರ ಬಗ್ಗೆ ತೀವ್ರರಾಗಿ ಹೋರಾಟ ಮಾಡುತ್ತೇವೆಂದು ಹೇಳಿ ಅಲ್ಲಿ ಶಾಸನ ಸಭೆಯಲ್ಲಿ ನಿರ್ಣಯ ಮಾಡಿದ್ದಾರೆ.

ಅಧ್ಯಕ್ಷರು ; ತಾವು ಹಿರಿಯ ಸದಸ್ಯರು ಇದ್ದೀರಿ..... ಪ್ರಶ್ನೋತ್ತರ ....

ಶ್ರೀ ವಾಟಳ್ ನಾಗರಾಜ್ : ಬೆಳಗಾವಿ ಜಿಲ್ಲಾ ತಾಲ್ಲೂಕು ಪಂಚಾಯತಿಯವರು ಕೂಡ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಅನ್ನತಕ್ಕಂಥ ನಿರ್ಣಯ ಮಾಡಿದ್ದಾರೆ, ಇವತ್ತಿನವರೆಗೂ ಸರ್ಕಾರ ಆ ತಾಲ್ಲೂಕು ಪಂಚಾಯತಿಯನ್ನು ರದ್ದು ಮಾಡಿಲ್ಲ, ಆ ರೀತಿ ನಿರ್ಣಯ ಮಾಡಿ ಸ್ವಲ್ಪ ಹೆಚ್ಚು-ಕಡಿಮೆ 20 ದಿವಸ ಆಗಿದೆ. ಇಲ್ಲಿ ಪ್ರಶ್ನೋತ್ತರ ಕಾಲದ ಬಗ್ಗೆ ನನ್ನದೇನೂ ತಕರಾರು ಇಲ್ಲ, ಈ ಸದನದ ನಿಯಮವನ್ನು ಉಲ್ಲಂಘನೆ ಮಾಡಬೇಕು ಎನ್ನುವ ಉದ್ದೇಶ ನನಗಿಲ್ಲ, ನಮಗೆ ಎಷ್ಟು ಅತ್ಯಂತ ಭಯಭೀತಿ ಇವತ್ತು ಬರುತ್ತಾ ಇದೆ ಎಂದು ಹೇಳಿದರೆ ಅಲ್ಲಿನ ಪಾರ್ಲಿಮೆಂಟರಿ ಸದಸ್ಯರೆಲ್ಲಿ ನಿಯೋಗ ಹೋಗುತ್ತಿದ್ದಾರೆ. ಸರ್ವ ಪಕ್ಷದವರು ನಿಯೋಗ ಹೋಗುತ್ತಾ ಇದ್ದಾರೆ, -ಅಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿಬೇಕೆಂದು..

ಅಧ್ಯಕ್ಷರು : ಸದಸ್ಯರ ಹಕ್ಕಿಗೆ ಮೊಟಕು ಮಾಡಿದ ಹಾಗೆ ಆಗುತ್ತದೆ. ದಯವಿಟ್ಟು ಸಹಕರಿಸಿ. ಬಪಡಬೇಡಿ ಧೈರ್ಯವಾಗಿರಿ...

ಶ್ರೀ ವಾಟಾಳ್ ನಾಗರಾಜ್ : ನನಗೆ ಭಯಪಡುವ ಪ್ರಶ್ನೆ ಅಲ್ಲ, ಭಯಭೀತಿ ಪಡುತ್ತೇವೆ ಎಂದು ಅಲ್ಲ, ನಾವು ಹೋರಾಟಕ್ಕೆ ತಯಾರಾಗಿದ್ದೇವೆ, ಆ ಪ್ರಶ್ನೆ ಬೇರೆ. ಮಾನ್ಯ ಮುಖ್ಯಮಂತ್ರಿಗಳು ಎರಡು ತರಹ. ಒಂದು ನಾನು ಆ ರೀತಿ ಹೇಳಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ನನಗೆ ನಂಬಿಕೆ ಇದೆ, ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನಾನು ಇವತ್ತು ಮಹಾರಾಷ್ಟ್ರ ಶಾಸನಸಭೆಯ ನಿರ್ಣಯವನ್ನು ವಿರೋಧಿಸಿ ಈಗ ಸಭಾತ್ಯಾಗ ಮಾಡುತ್ತೇನೆ. ಮಹಾರಾಷ್ಟ್ರದ ಶಾಸನಸಭೆಯಲ್ಲಿ ಕೈಗೊಂಡ ನಿರ್ಣಯ ಏನು ಇದೆ ಇದು ಕರ್ನಾಟಕ ವಿರೋಧ ನಿರ್ಣಯ ಅದಕ್ಕಾಗಿ ನಾನು ಕಪ್ಪು ಬಾವುಟ ಪ್ರದರ್ಶನ ಮಾಡಿ ಈಗ ಸಭಾತ್ಯಾಗ ಮಾಡುತ್ತೇನೆ ಇದು ಒಳ್ಳೆಯದಲ್ಲ.

ಇದು ಮುಗಿದಿರತಕ್ಕ ಪ್ರಶ್ನೆ. ಮಹಾಜನ್ ವರದಿ ಕಾರ್ಯಗತ ಮಾಡಬೇಕೆಂಬುದು ನಮ್ಮೆಲ್ಲರ ಒತ್ತಾಯ.

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಇಷ್ಟು ತೀರ ನನ್ನ ಕಡೆಗಾಣಿಸಿ ಪ್ರಶ್ನೋತ್ತರ..

ಅಧ್ಯಕ್ಷರು : ಸದಸ್ಯರ ಹಕ್ಕು ಕಾಯಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದೂ ಹಕ್ಕಲ್ಲವೇ?

ಅಧ್ಯಕ್ಷರು : ಒಂದು ಗಂಟೆಯ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ನಾಳೆ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗುವುದಾದರೆ ನಮ್ಮ ಪರಿಸ್ಥಿತಿ ಏನು ಎಂದು ನಾನು ಕೇಳುತ್ತೇನೆ..

ಅಧ್ಯಕ್ಷರು : ಒಂದು ಗಂಟೆಯ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ ; ನಿಮ್ಮ ಬಗ್ಗೆ ನಾನು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ, ನಮಗೆ ಕೈ ಕಾಲು ಬಾಯಿ ಕಟ್ಟಿಬಿಟ್ಟಿದೆ, ಪರಿಸ್ಥಿತಿ ಸರಿಯಾಗಿಲ್ಲ.

ಅಧ್ಯಕ್ಷರು : ಇಲ್ಲ, ಇಲ್ಲ, ನೀವು ದಯಮಾಡಿ..

ಶ್ರೀ ವಾಟಾಳ್ ನಾಗರಾಜ್ : ನಿಯಮವನ್ನು ರದ್ದುಪಡಿಸಿ ಇದನ್ನು ಚರ್ಚೆ ಮಾಡಬೇಕಾದದ್ದು ನಮ್ಮ ಕರ್ತವ್ಯ.

ಅಧ್ಯಕ್ಷರು ; ಸೂಚನೆಯನ್ನೇ ಕೊಟ್ಟಿಲ್ಲವಲ್ಲಾ? ಸೂಚನೆಯನ್ನು ಕೊಡದೆ ಏಕಾಏಕಿ ತಮ್ಮ ಸ್ಥಳದಲ್ಲಿ ಎದ್ದು ನಿಂತು ಪ್ರಶ್ನೋತ್ತರ ರದ್ದು ಮಾಡಿ ಎಂದರೆ ಹೇಗೆ ಸದನ ನಡೆಸುವುದು? ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಗಂಭೀರವಾದ ಪರಿಸ್ಥಿತಿಯನ್ನು ತಮ್ಮಲ್ಲಿ ಚರ್ಚೆ ಮಾಡಬೇಕಂಬ ಉದ್ದೇಶದಿಂದ ಅದಕ್ಕೋಸ್ಕರ ಬಂದೆ. ಆದರೆ ತಾವು ತರಾತುರಿಯಲ್ಲಿ ಒಳಗಡೆ ಬಂದಿರಿ ನಾನು ನಿಮ್ಮ ಹಿಂದೆ ಬಂದು ನಿಮ್ಮನ್ನು ಪ್ರಶ್ನೆ ಮಾಡತಕ್ಕಂಥದ್ದು ಸೌಜನ್ಯವಲ್ಲ ದಯಮಾಡಿ ಕ್ಷಮಿಸಬೇಕು. ಈ ವಿಚಾರದಲ್ಲಿ ನನ್ನಿಂದೇನಾದರೂ ಅಪರಾಧ ಆಗಿದ್ದರೆ ಕ್ಷಮಿಸಿ ಎಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅತ್ಯಂತ ಪ್ರಮಾಣಿಕವಾಗಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಮ್ಮಲ್ಲಿಯೂ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಪ್ರಶ್ನೋತ್ತರ ಕಾಲವನ್ನು ರದ್ದು ಪಡಿಸಿ ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಪ್ರಮುಖವಾದುದನ್ನು ಪ್ರಸ್ತಾಪ ಮಾಡಿದ್ದಾರೆ. ಬೆಳಗಾವಿ ನಮಗೆ ಸೇರಲೇಬೇಕಾಗುತ್ತದೆ, ಮಹಾಜನ್ ಆಯೋಗದ ತೀರ್ಪಿನ ವಿರುದ್ಧ ಯಾವುದೇ ವ್ಯಕ್ತಿ ಮಾಡನಾಡಲು ಸಾಧ್ಯವಿಲ್ಲ, ಕನ್ನಡ ನಾಡಿನ ಒಂದು ಇಂಚು ಕೂಡ ಹೊರಗಡೆ ಹೋಗುವ ಪ್ರಶ್ನೆ ಇಲ್ಲ, ಅವರು ಪ್ರಸ್ತಾಪ ಮಾಡಿರುವುದನ್ನು ಬೇರೆ ಸಮಯ ದಲ್ಲಿ ವಿಶೇಷವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಬಹಳ ಪ್ರಮುಖವಾದುದ್ದನ್ನು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು ; ಕೊಡೋಣ, ಚರ್ಚೆ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ ; ಇಡೀ ಸದನ ಆ ಬೆಳಗಾಂನ ಒಂದು ಇಂಚು ನೆಲ ಆ ಕಡೆ ಈ ಕಡೆ ಹೋಗದ ಹಾಗೆ, ಯಾವುದೇ ಒಂದು ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲ, ಯಾವುದೇ ಶಕ್ತಿ ಆ ಒಂದು ಸಾಹಸ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನಾನು ಹೇಳುವುದು ಏನೆಂದರೆ ಈ ನಿರ್ಣಯ ಇವತ್ತೇ ಆಗಬೇಕು, ಇಡೀ ಸದನದಲ್ಲಿ ಕೈ ಮುಗಿದು ಕೇಳುತ್ತಿದ್ದೇನೆ. ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಚಾರವನ್ನು ತೆಗೆದುಕೊಳ್ಳಬೇಕು, ಇದು ಬಾವಿ, ರಸ್ತೆ ಪ್ರಶ್ನೆ ಅಲ್ಲ, ಇಡೀ ಜೀವನ್ಮರಣದ ಪ್ರಶ್ನೆ. ಬೆಳಗಾವಿ ಜೀವನ್ಮರಣದ ಪ್ರಶ್ನೆ. ಈ ಬಗ್ಗೆ ನಾವು ಒಕ್ಕೊರಲಿನಿಂದ ನಿಲ್ಲಬೇಕು ಅನ್ನುವಂತಹ ಮಾತು ಹೇಳುತ್ತೇನೆ ತಮ್ಮ ವಿರುದ್ಧ ನಾನು ಹೋಗುತ್ತಾ ಇಲ್ಲ, ಮಹಾರಾಷ್ಟ್ರ ಸರ್ಕಾರದ ನೀತಿಯ ವಿರುದ್ಧ, ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜರವರು ಸಭಾತ್ಯಾಗ ಮಾಡಿದರು).

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಪಡಿತರದ ವಿತರಣೆ

367 : ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರ ಪಡಿತರ ವಿತರಣೆಗೆ ರಾಜ್ಯಕ್ಕೆ ಕೊಡುವ ಅಕ್ಕಿ ಹಾಗೂ ಗೋಧಿಯ ಬೆಲೆ ಎಷ್ಟು ಇದೆ?